Regd No M 1299 SATYAVADI Founded 1917

The Oldest Newspaper of Mysore

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎ೦. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದು)

ಸಂಪುಟ 32 ಸಂಚಿಕೆ 66 | ಗುರುವಾರ 9—12—48 | ಬಿಡಿ ಪ್ರತಿ 3 ಪೈ

ತೃತೀಯ ಅಣು ಬಾಂಬಿನ ಮಹಾ ಯುದ್ಧ ಸಾಧ್ಯವಿದೆ ?

ವಾರ್ತೆಗಳು

ಅಮೃತಸರ, ಡಿ 7 — ಭಾರತ ಗಡಿಯಲ್ಲಿ ಪಾಕಿಸ್ತಾನ್ ಭಾರತ ಸೇನೆಗಳಲ್ಲಿ ಗುಂಡಿನ ಹೊಡೆತಗಳು ಜರುಗಿದವು. ಒಂದು ಎಮ್ಮೆ ಮಾತ್ರ ಕಳುವಾಗಿದೆ.

ಂ ಂ

ನವದೆಹಲಿ, ಡಿ 7 — ಗವರ್ನರ್ ಜನರಲ್ ರಾಜಾಜಿ ಜೈಪುರ ಕಾಂಗ್ರೆಸಿಗೆ ಹೋಗುವುದಿಲ್ಲವೆಂದು ಗೊತ್ತಾಗಿದೆ.

ಂ ಂ

ಕಲ್ಕತ್ತಾ, ಡಿ 8 — ಇಲ್ಲಿಯ ರೊಟರಿ ಕ್ಲಬ್‌ಗೆ ಇತ್ತ ಸಂದೇಶದಲ್ಲಿ ಪಶ್ಚಿಮ ಬಂಗಾಳ ಗವರ್ನರ್ ಡಾ || ಖಟ್ಜು ರವರು ರೋಟರಿ ಚಳುವಳಿಗೆ ಭಾರತದ ಪೂರ್ಣ ಸಹಾಯವಿದೆಯೆಂದು ತಿಳಿಸಿರುವರು.

ಂ ಂ

ಷಾಂಘಾಯಿ, ಡಿ 8 — ಶನಿವಾರ ಜಲಸಮಾಧಿಯಾದ ಕಿಯಾಂಗ್ಸು ಹಡಗಿನಲ್ಲಿದ್ದ 2 ಸಾವಿರ ಪುಂದಿ ಪತ್ತೆಯಾಗಿಲ್ಲ. ದೌರ್ಜನ್ಯಕಾರಿಂದ ಹಡಗು ನೀರು ಪಾಲಾಯಿತೆಂದು ಗೊತ್ತಾಗಿದೆ.

ಂ ಂ

ಭೂಪಾಲ್, ಡಿ 8 — ಭೂಪಾಲ ಮಧ್ಯ ಭಾರತ ಯೂನಿಯನ್‌ನಲ್ಲಿ ಐಕ್ಯವಾಗುವುದಕ್ಕೆ ಸಂಸ್ಥಾನ ಕಾಂಗ್ರೆಸ್ ವಿರೋಧ ವ್ಯಕ್ತಪಡಿಸಿದೆ.

ಂ ಂ

ವಾಷಿಂಗ್ಟನ್, ಡಿ 7 — ಶ್ರೀಮತಿ ಚಿಯಾಂಗರ ರಾಯಭಾರ ವಿಫಲವಾಗಬಹುದೆಂದು ರಾಜಕೀಯ ವೃತ್ತಗಳಲ್ಲಿ ಕೇಳಿ ಬರುತ್ತಿದೆ.

ಂ ಂ

ಬೆಂಗಳೂರು, ಡಿ 8 — ಶ್ರೀ ಜಯಚಾಮರಾಜೇಂದ್ರ ಸ್ಪೇಡಿಯಂ ಅಭಿವೃದ್ಧಿಗಾಗಿ ಸರ್ಕಾರ ರೂ. 75 ಸಾವಿರ ಇತ್ತಿದೆ

ಂ ಂ

ಬೆಂಗಳೂರು, ಡಿ 9 — ನವೆಂಬರ್ ೭ರಂಗಳ ವರಿಗೆ ನಗರ ಕಾಂಗ್ರೆಸ್ ಸಮಿತಿ ರೂ 40 ಸಾವಿರವನ್ನು ಗಾಂಧಿ ಸ್ಮಾರಕ ನಿಧಿಗೆ ಸೇರಿಸಿದೆ.

Woodlands

10—12—48 ರಿಂದ

4 ದಿನಗಳು

— ಬೆಳಗಿನ ಪ್ರದರ್ಶನ —

White Rider

ನವೀನ್ ಯಾಜ್ಞಿಕ್, ರಾಧಾರಾಣಿ ಅಘಾ ಅಭಿನಯಿಸಿರುವ

ವೈಟ್ ರೈಡರ್

(ಮನೋಹರ ಹಿಂದಿ ಚಿತ್ರ)

ಸುದ್ದಿಗಳು

ಬೆಂಗಳೂರು, ಡಿ 9 — ಗಾಂಧೀಜೀ ಸ್ಮಾರಕ ನಿಧಿಗೆ ಟ್ರಾನ್ಸ್‌ಪೋರ್ಟ್ ಕಂಪೆನಿ ರೂ. 10 ಸಾವಿರ ಇತ್ತಿದೆ.

ಬೆಂಗಳೂರು, ಡಿ 8 — ಪಂಡಿತ್ ನೆಹರು ತಾ || 26 ರ ಸಂಜೆ 5 ಗಂಟೆಗೆ ವಿಮಾನದಲ್ಲಿ ಆಗಮಿಸುವರು. ಪನ ಕೂಟ ಮತ್ತು ಭೇಟಿಗಳು ನಡೆಯುವುವು. ತಾ | 27 ರ ಬೆಳಿಗ್ಗೆ 9-30 ಕ್ಕೆ ಧ್ವಜಾರೋಹಣವನ್ನು ಸುಭಾಷ್ ನಗರದಲ್ಲಿ ಸಂಜೆ 7-30 ಗಂಟೆಗೆ ಅಲ್ಲೇ ಬಹಿರಂಗ ಸಭೆ. ತಾ || 28 ರಲ್ಲಿ ಮೈಸೂರಿಗೆ ತೆರಳುವರು. ಕೆಡೆಟ್ಟಾ ಸ್ವಾಗತ. ತಾ | 29 ರಲ್ಲಿ ಮೈಸೂರು ಬಿಡುವರು.

ಬೆಂಗಳೂರು, ಡಿ 8 — ಮೈಸೂರಿನ ಪೌರಸಭಾ ಪ್ರದೇಶದಲ್ಲಿ ಜನವರಿ 1 ರಿಂದ ಬಿಕ್ಷುಕ ನಿರೋಧ ಶಾಸನ ಜಾರಿಯಾಗುವುದು.

ನವದೆಹಲಿ, ಡಿ 8 — ರಾಜಾಜಿಗೆ ತಮ್ಮ ಜನ್ಮದಿನವೇ ಗೊತ್ತಿಲ್ಲವಂತೆ !

ಜೈಪುರ, ಡಿ 6 — ವಿಶೇಷ ರೈಲು ಜುನಾಯಿತರಾಗಿರುವ ಕಾಂಗ್ರೆಸ್ ಅಧ್ಯಕ್ಷರನ್ನು ತಾ | 15 ರಲ್ಲಿ ದೆಹಲಿಯಿಂದ ಬೆಳಿಗ್ಗೆ 6 ಗಂಟೆಗೆ ಹೊರಟು ಅದೇ ಮಧ್ಯಾಹ್ನ 1-45 ಕ್ಕೆ ಗಾಂಧಿ ನಗರಕ್ಕೆ ತರುವುದು.

ಪ್ಯಾರಿಸ್, ಡಿ 8 — ಕೋರಿಯಾ ಒಗ್ಗೆ ನೇಮಿತವಾಗಿರುವ ವಿಶ್ವಸಂಸ್ಥೆಯ ಸಮಿತಿಯನ್ನು ರದ್ದು ಪಡಿಸಬೇಕೆಂದು ರಷಿಯಾ ಕೇಳಿದೆ.

ಮೂರನೆಯ ಯುದ್ಧ

ಕಲ್ಕತ್ತಾ, ಡಿ 8 — ವಿಶ್ವಜನಾಂಗ ಸಂಸ್ಥೆ ಎಲ್ಲಿ ಪರಾಜಯವಾಯಿತೋ ಅಲ್ಲಿ ವಿಶ್ವಸಂಸ್ಥೆಯ ಸಾಮಾಜಿಕ ಮತ್ತು ಆರ್ಥಿಕ ಸಮಿತಿ ಜಯಪಡೆಯುವುದೆಂಬ ಆಶಯವನ್ನು, ಬೀರಭೂಮಿನಲ್ಲಿ ಸೇರಿದ್ದ ಸಾಮಾಜಿಕ ಮತ್ತು ಆರ್ಥಿಕ ಸಮಿತಿಗೆ ಭಾರತ ನಿಯೋಗಿಗಳಲ್ಲೊಬ್ಬರಾಗಿದ್ದ ಕಲ್ಕತ್ತಾ ವಿಶ್ವವಿದ್ಯಾನಿಲಯದ ಉಪಸಂಸ್ಥಾನಪತಿ ಶ್ರೀ ಪಿ. ಎಸ್. ಬೇನರ್ಜಿ ಪತ್ರಿಕಾ ಸಮ್ಮೇಳನದಲ್ಲಿ ವ್ಯಕ್ತಪಡಿಸಿದರು.

ವಿಶ್ವಜನಾಂಗ ಸಂಸ್ಥೆ ಎರಡು ಭಾಗಗಳಾಗಿವೆ ಎಂದು ಅವರು ಹೇಳಿದರು. ಆರ್ಥಿಕ ಮತ್ತು ಸಾಮಾಜಿಕ ಸಮಿತಿಗೆ ಇನ್ನೂ ಆ ದುರವಸ್ಥೆ ಬಂದಿಲ್ಲ ವಿಶ್ವ ಜನಾಂಗ ಸಂಸ್ಥೆ ಪರಾಜಯವಾದಾಗ್ಯೂ ಆರ್ಥಿಕ ಮತ್ತು ಸಾಮಾಜಿಕ ಸಮಿತಿ ಪರಾಜಯವಾಗಬೇಕಾಗಿಲ್ಲ. ಹೇಗಾದರೂ ಆರ್ಥಿಕ ಮತ್ತು ಸಾಮಾಜಿಕ ಸಮಿತಿ ಪರಾಜಯ ಪಡೆದರೆ ಮೂರನೇ ಅಣು ಬಾಂಬಿನ ಯುದ್ಧ ಮಾತ್ರ ಸಾಧ್ಯ ಎಂದವರು ತಿಳಿಸಿದರು.

ಂ

ಪ್ಯಾರಿಸ್, ಡಿ 8 — ವಿಶ್ವಸಂಸ್ಥೆ ಸದಸ್ಯತ್ವಕ್ಕೆ ಸಿಲೋನಿನ ಅರ್ಜಿಯನ್ನು ಭಾರತ ಬೆಂಬಲಿಸಿತು.

ಪೌರಸಭೆ

ಮೈಸೂರು, ಡಿ 9 — ಇಂದು ಶ್ರೀ ಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ ವಿಶೇಷ ಸಭೆ ಸೇರಿತು.

ಶ್ರೀ ನರಸಿಂಹಪ್ಪಂಗಾರ್ಯರು ಉಪಾಧ್ಯಕ್ಷರಾಗಿ ಜುನಾಯಿಸಲ್ಪಟ್ಟರು.

ವಿವಿಧ ವಿಷಯ

ಮೈಸೂರು, ಡಿ 9 — ಮುಂಡಿನೊಹಲ್ಲಾ ಈದಿಗ ಬಡಾವಣೆಯಲ್ಲಿರುವ ಶ್ರೀ ಪಿ ವೆಂಕಟಪ್ಪನವರ ಕಟ್ಟಡದಲ್ಲಿ ಭಿಕ್ಷುಕರ ವಸತಿ ಗೃಹದ ಸಮಾರಂಭೋತ್ಸವವನ್ನು ಶ್ರೀ ಬೆಂಗಳೂರು ಸುಬ್ಬಣ್ಣನವರು ನಾಳೆ ಬೆಳಿಗ್ಗೆ 9 ಗಂಟೆಗೆ ನೆರವೇರಿಸುತ್ತಾರೆ.

ಂ ಂ

ಮೈಸೂರು ಕಾಂಗ್ರೆಸ್ಸಿನ ಹೊಲಸನ್ನು ನೋಡಿದರೆ ಪೂಜ್ಯ ಬಾಪೂಜಿಯು ಹಾಕಿಕೊಟ್ಟ ಸತ್ಯ, ಅಹಿಂಸೆ, ಶಾಂತಿ, ಶಿಸ್ತು ಪದಗಳಲ್ಲಿ ಅಹಿಂಸೆಯ 'ಅ' ಕಾರ ಒಂದನ್ನು ತೆಗೆದು ಸತ್ಯ, ಶಾಂತಿ, ಶಿಸ್ತುಗಳಿಗೆ ಅದೇ 'ಅ' ಕಾರವನ್ನು ಸೇರಿಸಿದರೆ ಆಗುವ ಅಸತ್ಯ, ಹಿಂಸೆ, ಅಶಿಸ್ತುಗಳು ಕಾಂಗ್ರೆಸ್ ಸಂಸ್ಥೆಯಲ್ಲಿ ನಗ್ನ ನೃತ್ಯ ಮಾಡತ್ತಿವೆ ಎಂದು ಬಳ್ಳಾರಿ ಮುರಿಗೆಪ್ಪನವರು ಹೇಳಿಕೆಯಿತ್ತಿದ್ದಾರೆ

ಂ

ಹೈದರಾಬಾದು, ಡಿ 7 — ಕಳೆದ 20 ವರ್ಷಗಳಿಂದ ಡಾ | ನಾ. ಸು. ಹರ್ಡೀಕರರ ನೇತೃತ್ವದಲ್ಲಿದ್ದ ಸಂಸ್ಥಾನವನ್ನು ಪ್ರಾದೇಶಿಕಸ್ವರೂಪಕ್ಕೆ ಪರಿವರ್ತಿಸಲಾಗಿದೆಯೆಂಬ ನಿಷೇಧಾಜ್ಞೆಯನ್ನು ರದ್ದು ಮಾಡಲ್ಪಟ್ಟಿತು.

ಂ ಂ

ಬೆಂಗಳೂರು, ಡಿ 8 — ನಾಡಿದ್ದಿನಿಂದ ಗೋಪಾಲರಾವ್ ಎಜಾರಣ್ಣಾ ಸಮಿತಿ ಪುನಃ ಆರಂಭವಾಗುವುದು.

ಂ ಂ

ಹಾಂಕಾಂಗ್, ಡಿ 8 — ಚೀನಾ ಯಾದವಿ ಕಲಹದಲ್ಲಿ ಕಮ್ಯುನಿಸ್ಟರೇನಾದರೂ ವಿಜಯಗಳಿಸಿದರೆ ಚಿಯಾಂಗ್ ಕೈಷೇಕರು ಆತ್ಮಹತ್ಯ ನಾಡಿಕೊಳ್ಳುವರೆಂದು ಚೀನೀ ಪ್ರಮುಖ ಪತ್ರಿಕೆಗಳ ಪ್ರಕಟಣೆ ಆತ್ಮಹತ್ಯ ನಿರ್ಧಾಯವನ್ನು ಚಿಯಾಂಗರು ಆಪ್ತರಲ್ಲಿ ತಿಳಿಸಿರುವುದಾಗಿ ವಂದಿ ನಾನ್ಕಿಂಗ್ ನಗರದಲ್ಲಿರುವ ಸನ್‌ಯತ್ ಸೇಕ್ ಪ್ರತಿಮೆ ಬಳಿ ಆತ್ಮಹತ್ಯ ಮಾಡಿಕೊಳ್ಳುವುದಾಗಿ ವಂದಿ

ವುಡ್‌ಲ್ಯಾಂಡ್ಸ್

3—12—48 ರಿಂದ

SHANTI

ಜೀವನ್, ವಿಜಯಲಕ್ಷ್ಮಿ, ಲಲಿತ ಸುನಾಲಿನಿದೇವಿ ಪಾತ್ರವಹಿಸಿರುವ

ಶಾಂತಿ

(ಮಹೋನ್ನತ ಹಿಂದಿ ಚಿತ್ರ)

ಪ್ರತಿದಿನ 2 ಆಟಗಳು

ಕಾಂಗ್ರೆಸ್ ಅಧ್ಯಕ್ಷ ಡಾ || ಪಟ್ಟಾಭಿ ಸೀತಾರಾಮಯ್ಯನವರ

ಸಂಬಂಧವಾದ

ಸ್ವಾರಸ್ಯ ಪ್ರಸಂಗ

ಗಾಂಧೀಜಿ 'ತ್ರಿ ವಿಧ ಬಹಿಷ್ಕಾರ' ಗಳನ್ನು ಶಾಸಿಸಿದರು.

ಲಾಯರುಗಳೂ ಇತರ ಉದ್ಯೋಗಿಗಳೂ ತಮ್ಮ ತಮ್ಮ ಪದವಿಗಳನ್ನು ಪರಿತ್ಯಜಿಸುತ್ತಿದ್ದ ದಿನಗಳು ಅವು. ಎಲ್ಲರಂತೆಯೇ ಪಟ್ಟಾಭಿ ಸೀತಾರಾಮಯ್ಯನವರು ಕೂಡ ವೈದ್ಯವೃತ್ತಿಯನ್ನು ತ್ಯಜಿಸಿದರು.

ಆದರೆ ಪಟ್ಟಾಭಿಯವರ ವೈದ್ಯ ವೃತ್ತಿಯ ಪರಿತ್ಯಾಗಕ್ಕೆ ಗಾಂಧೀಜಿಯವರ ಆದೇಶವೇ ಅಲ್ಲ : ಮುಖ್ಯ ಕಾರಣವು ಬೇರೆ.

ಚಿಲ್ಲಪಲ್ಲಿ ರಾಜಾರವರ ಅರಮನೆಯಲ್ಲಿ ಟೈಫಾಯಿಡ್ ಕೇಸೊಂದು ಡಾಕ್ಟರರ ಹಸ್ತಗತವಾಯಿತು. ಔಷಧಿಯನ್ನು ಕೊಡಲಾರಂಭಿಸಿದರು. ಆ ಟೈಫಾಯಿದು 21 ದಿನಗಳು ಕಳೆದನಂತರ ಡಬ್ಬಲ್ ಟೈಫಾಯಿಡ್ ಆಗಿ ಪರಿಣಮಿಸಿತು.

ಪುನಃ 45 ದಿವಸಗಳು ಕಳೆದನಂತರ ಅದು ಟ್ರಿಬಲ್ ಟೈಫಾಯಿಡ್ ಆಗಿ ಪರಿಣಮಿಸಿತು.

ಈಬಗೆಯಲ್ಲಿ ಆದದ್ದಕ್ಕೆ ಡಾ|| ಪಟ್ಟಾಭಿಯವರಿಗೆ ಮಹಾವ್ಯಾಕುಲವಾಯಿತು. ಅರಮನೆಯವರೂ ಚಿಂತಾಕ್ರಾಂತರಾದರು.

'ನಮ್ಮ ಕ್ಷೌರಿಕ ಪಾರ್ಥಸಾರಥಿಯಾವ ಜ್ವರವನ್ನಾದರೂ ಬೇಗ ಗುಣಪಡಿಸುತ್ತಾನೆ. ಇದೇನು ಹೀಗೆ ಆಗಿದೆ? ಡಾಕ್ಟರರ ಕೈಯಲ್ಲಿ ಒಂದಕ್ಕೆ ಡಬ್ಬಲ್ ಡಬ್ಬಲ್ಲಿಗೆ ಟ್ರಿಬಲ್, ಹೀಗೆ ಬದಲಾವಣೆಯಾಗುತ್ತಿದೆ' ಎಂದು ಯೋಚಿಸಿಕೊಂಡು ಡಾಕ್ಟರರಿಂದ ಔಷಧ ಕೊಡಿಸುವುದನ್ನು ನಿಲ್ಲಿಸಿ, ಕ್ಷೌರಿಕ ಪಾರ್ಥಸಾರಥಿಯನ್ನು ಕರೆಕಳುಹಿಸಿದರು ಅವನು ಔಷಧಿಯನ್ನು ಕೊಡಲು ಜ್ವರವು ಕೂಡಲೇ ನಿಂತಿತು.

ಆದರೆ ತಾನು ಔಷಧಿಯನ್ನು ಕೊಟ್ಟ 45 ದಿನಗಳಿಗೆ ಬಿಲ್ಲು ತಯಾರಿಸಿ ಡಾ || ಪಟ್ಟಾಭಿಯವರು ಅರಮನೆಗೆ ಕಳುಹಿಸಿದರು. ಬಿಲ್ಲು ಅಲ್ಲ, ಒಂದು ಸನೆದ ಕಾಸೂ ಕೊಡವುದಿಲ್ಲ; ರೋಗಿಯನ್ನು ಶಯ್ಯಾವಶಿಷ್ಟನನ್ನಾಗಿ ಮಾಡಿದ್ದಲ್ಲದೆ ಹಣವನ್ನೂ ಕೊಡಬೇಕೇ, ಎಂದು ಅರಮನೆಯಿಂದ ಸಮಾಚಾರ ಬಂತು. ಡಾಕ್ಟರರು ನಿಶ್ಚೇಷ್ಟರಾದರು.

ಕ್ಷೌರಿಕನಾದ ಪಾರ್ಥಸಾರಥಿಯ ಆಯುರ್ವೇದ ಔಷಧಿಯು ಮುಂದೆ ಆಲ್ಲೋಪತಿಯಲ್ಲಿ ಡಿಗ್ರಿಯನ್ನು ಪಡೆದ ತನ್ನ ಔಷಧಿಯು ಅವಹೇಳನೆಯನ್ನು ಹೊಂದಿದ್ದಕ್ಕಾಗಿ ಡಾಕ್ಟರರಿಗೆ ಒಂದು ಬಗೆಯಲ್ಲಿ ಆಪಮಾನವಾಯಿತು. ಕೂಡಲೇ ವೈದ್ಯವೃತ್ತಿಯನ್ನು ವಿಸರ್ಜಿಸಿ ಆಯುರ್ವೇದದಲ್ಲಿಯು ರಹಸ್ಯಗಳನ್ನು ಕೂಡ ಹಿರಿಯರಿಂದ ತಿಳಿದುಕೊಂಡರು.

ಪಟ್ಟಾಭಿಯವರ ವೈದ್ಯ ವೃತ್ತಿಯ ವಿಸರ್ಜನೆಗೆ ಮುಖ್ಯ ಕಾರಣಗಳಲ್ಲಿ ಇದೂ ಒಂದು : ಈ ವಿಷಯವನ್ನು ಡಾಕ್ಟರರೇ ಹೇಳಿರುವರು. [ವಾ]

ಚಿಟ್ಟೆ ನುಂಗುವ ಜೂಜಾಟ

ಅಮೇರಿಕಾದ ಜಾರ್ಜಿಯದಲ್ಲಿ ಹುಲ್ಲಿನ ಮೇಲೆ ಹಾರುತ್ತಿರುವ ಚಿಟ್ಟೆಗಳನ್ನು ಹಿಡಿದು ಬೇವಂತ ನುಂಗುವ ಜೂಜಾಟವು ಬಹಳ ಬೆಳೆದಿದೆ. ಒಂದು ಚಿಟ್ಟೆ ನುಂಗಿದರೆ 1 ರಿಂದ 20 ಡಾಲರವರೆಗೆ ಪಣಕಟ್ಟುವರು. ಬೇವಂತ ಚಿಟ್ಟೆ ನುಂಗುವಾಗ ಗಂಟಲಲ್ಲಿ ಕೆರೆದಂತಾಗುವುದೆಂದು ನುಂಗಿದ ಒಬ್ಬ ಹುಡುಗಿಯು ತನ್ನ ಅನುಭವ ಹೇಳಿದ್ದಾಳೆ.

ಸತ್ಯವಾದಿ

ದಿನ ಪತ್ರಿಕೆ ತಿಂಗಳಿಗೆ ಆರು ಆಣೆ

ಪ್ರಬೋಧ ಪುಟದಿಂದೊಡಗೂಡಿದ ಸೋಮವಾರ ಸಂಚಿಕೆ ವಾರ್ಷಿಕಚಂದಾ ಪರಸ್ಥಳಕ್ಕೆ ಅಂಚೆವೆಚ್ಚ ಸೇರಿ 1–12–0

Protect the Cow

ಗೋ ರಕ್ಷಣೆ ನಡೆಯಲಿ

Edited, Printed and Published by M S Krishna Rao at the Satyavadi Press, Chamarjpuram Mysore

At Opera 10–12–48 ರಿಂದ

ಎ ಎಸ್. ಜಾನಕಿ, ಬಾಲಯ್ಯ, ಬಾಲಸುಬ್ರಹ್ಮಣ್ಯಂ, ಲಲಿತ, ಪದ್ಮಿನಿ

— ಪಾತ್ರವಹಿಸಿರುವ —

ಮೋಹಿನಿ

(ತಮಿಳು)

ಪ್ರತಿ ದಿನ 3 ಪ್ರದರ್ಶನಗಳು

Morning Shows from 10-12-48

The Secret Code

SHAKTI SUDHA

A Superb Tonic

ಶಕ್ತಿಸುಧಾ

— ಫಸ್ಟ್ ಕ್ಲಾಸ್ ಟಾನಿಕ್ —

ಧಾತು ಪುಷ್ಟಿ, ರಕ್ತವೃದ್ಧಿ, ದೇಹ ಸೌಂದರ್ಯ ಹೆಚ್ಚಿಸುವುದು